‘ರಿಲೇಶನ್’ನಲ್ಲಿ ಗೌರವದಿಂದಿರುವುದು ಸಹ ಸುಲಭದ ಸಂಗತಿಯಲ್ಲ. ಆದರೂ ನಾನು ಜೀವನದಿಂದ, ಸಂಬಂಧಗಳ ಸಮೀಕರಣದಿಂದ ಸೋಲೊಪ್ಪಿಕೊಳ್ಳುವುದಿಲ್ಲ.

## ನನ್ನೊಳಗಿನ ಹೆಣ್ಣು

ರಿತಿಕ್ ಮತ್ತು ನನ್ನ ಸಂಬಂಧಗಳಲ್ಲಿ ಬಿರುಕುಗಳು ಹೇಗೆ ಬಿಡುತ್ತಾ ಹೋದವೋ ತಿಳಿಯಲಿಲ್ಲ. ನಾವು ಸಾಮಾನ್ಯವಾಗಿ ಪರಸ್ಪರ ಜಗಳ ಮಾಡುತ್ತಿದ್ದೆವು, ಗಂಡಹೆಂಡತಿಯಂತೆ! ನಾವು ಪ್ರೇಮಿಪ್ರೇಯಸಿಯಂತೆ ಪರಸ್ಪರ ಕಲೆತಿದ್ದೆವು, ಅವರ ಹಾಗೆಯೇ ಜೊತೆಯಲ್ಲಿರಲು ತೀರ್ಮಾನಿಸಿದ್ದೆವು. ಇದರಲ್ಲಿ ಮಹಾನಗರದ ಅಸಹಾಯಕತೆ ಇರಲಿಲ್ಲ, ಹಣ ಉಳಿಸುವ ವಿಚಾರ ಸಹ ಇರಲಿಲ್ಲ, ಸುರಕ್ಷತೆಯನ್ನು ಪಡೆಯುವ ಸಂಗತಿ ಸಹ ಇರಲಿಲ್ಲ. ನಾವು ನಮ್ಮ ಪ್ರೀತಿಯನ್ನು ಕಾಯ್ದಿಟ್ಟುಕೊಳ್ಳಲು ಬಯಸುತ್ತಿದ್ದೆವು. ಹೀಗಾಗಿ ಪರಸ್ಪರ ಒಟ್ಟಿಗಿದ್ದೆವು.

ಆರಂಭದಲ್ಲಿ ನಮಗೆ ಸಮಾಜದ ಚಿಂತೆಯಿರಲಿಲ್ಲ. ಆದರೆ ಹಳಸಿದ ಮತ್ತು ಬೇಸರ ತರುವ ಸಾಮಾಜಿಕತೆಯಿಂದಾಗಿ ಇದರ ಅಂತ್ಯವಾಯಿತು. ರಿತಿಕ್ ನನ್ನನ್ನು ‘ಇಟ್ಟುಕೊಂಡವಳು’ ಎಂದ; ಆ ಕ್ಷಣವೇ ಎಲ್ಲವೂ ಧ್ವಂಸವಾಯಿತು. ನಾನು ವಿವಾಹವನ್ನು ಮಾಡಿಕೊಳ್ಳದೆ ರಿತಿಕ್‌ನೊಂದಿಗಿರುತ್ತಿದ್ದೆ, ಹಾಗಾದರೆ ಅವನು ನನ್ನನ್ನು ‘ಇಟ್ಟು’ಕೊಂಡಿದ್ದನೇ? ಅದು ನಮ್ಮ ಕೊನೆಯ ವಾದವಾಗಿತ್ತು, ಕೊನೆಯ ಜಗಳವಾಗಿತ್ತು. ತದನಂತರ ನಾನು ಆ ಮನೆಯನ್ನು ತ್ಯಜಿಸಿ ಬಂದಿದ್ದೆ. ಆ ಮನೆಯನ್ನು ನಾವಿಬ್ಬರು ಸೇರಿ, ಇಬ್ಬರ ಹಣದಿಂದ ಜಂಟಿಯಾಗಿ ಖರೀದಿಸಿದ್ದೆವು. ರಿಜಿಸ್ಟರ್ ಪತ್ರಗಳಲ್ಲಿ ನಮ್ಮಿಬ್ಬರ ಹೆಸರಿನೊಂದಿಗೆ ಪತಿ ಪತ್ನಿ ಎಂದು ಬರೆಯಲಾಗಿತ್ತು. ನಾನು ಬಯಸಿದ್ದರೆ, ಆ ಪತ್ರಗಳ ಆಧಾರದಲ್ಲಿ ರಿತಿಕ್‌ನಿಂದ ಕಾನೂನು ಪ್ರಕಾರ ಹಕ್ಕನ್ನು ಪಡೆಯಬಹುದಿತ್ತು. ಆದರೆ ನಾನು ಹೀಗೆ ಮಾಡಲಿಲ್ಲ. ಬಲಾತ್ಕಾರದ ಅಧಿಕಾರ ನನಗೆ ಬೇಕಿರಲಿಲ್ಲ. ನಾನೀಗ ರಿತಿಕ್‌ನೊಂದಿಗಿರಲು ಸಾಧ್ಯವಿರಲಿಲ್ಲ, ಅವನೊಂದಿಗಿನ ಉತ್ತಮ ನೆನಪುಗಳ ಹೊರತಾಗಿಯೂ ಸಾಧ್ಯವಿರಲಿಲ್ಲ. ‘ಇಟ್ಟುಕೊಂಡವಳು’ ಶಬ್ದ ಅಣು ಬಾಂಬ್‌ನ ಕೆಲಸವನ್ನು ಮಾಡಿತ್ತು. ಅವನು ಕ್ಷಣಮಾತ್ರದಲ್ಲಿ ನನ್ನಿಡೀ ಜಗತ್ತನ್ನು ಸರ್ವನಾಶ ಮಾಡಿದ್ದ.

ರಿತಿಕ್‌ನ ಮನೆ ಅಲ್ಲ, ನನ್ನ ಮನೆ ಅಲ್ಲ, ಆದರೆ ನಮ್ಮಿಬ್ಬರ ಮನೆಯನ್ನು ತ್ಯಜಿಸಿದ ನಂತರ ನಾನು ನನ್ನ ಕಚೇರಿಗೆ, ಅಮ್ಮನ ಆರೋಗ್ಯ ಸರಿಯಿಲ್ಲ, ನಾನು ಕೂಡಲೇ ಅಮ್ಮನ ಬಳಿಗೆ ಭೂಪಾಲ್‌ಗೆ ಹೋಗುತ್ತಿದ್ದೇನೆ ಎಂದು ಫೋನ್ ಮಾಡಿ ತಿಳಿಸಿದೆ. ಸಿಕರವಾರರು ನನಗೆ ಕಚೇರಿಯ ಪರವಾಗಿ ನಿಶ್ಚಿಂತೆಯಿಂದ ಹೋಗಲು ಹೇಳಿದರು. ನಾನು ಕಾರಿನಲ್ಲಿ ನನ್ನ ಲಗೇಜುಗಳನ್ನು ಹಾಕಿಕೊಂಡೆ; ಈ ಮಾರುತಿ 800 ಕಾರನ್ನು ರಿತಿಕ್‌ನೊಂದಿಗಿನ ಬ್ರೇಕ್‌ಅಪ್‌ಗೆ ಕೆಲವು ದಿನಗಳ ಮೊದಲು ಕೀರ್ತಿಯಿಂದ ಖರೀದಿಸಿದ್ದೆ. ಅವಳು ಪ್ರಾಮಾಣಿಕವಾಗಿ, ‘ಹೊಸ ಕಾರನ್ನು ಖರೀದಿಸು, ಇದು ಹಳೆಯದಾಗಿದೆ’ ಎಂದು ಹೇಳಿದ್ದಳು.

‘ಹೊಸಬರು ಹಳೆಯ ಕಾರನ್ನೇ ಚಲಾಯಿಸಬೇಕು’ ಎಂದು ನಾನು ತರ್ಕಿಸಿದ್ದೆ. ಹೊಸ ಕಾರು ಖರೀದಿಸುವಷ್ಟು ಹಣ ನನ್ನಲ್ಲಿರಲಿಲ್ಲ. ಮನೆ ಖರೀದಿಸುವಾಗ ಸಾಕಷ್ಟು ಹಣವನ್ನು ವ್ಯಯಿಸಿದ್ದೆ. ಕೀರ್ತಿಗೂ ಈ ನಿಜಾಂಶ ತಿಳಿದಿತ್ತು. ಹೀಗಾಗಿ ಕೀರ್ತಿ ಈ ಬಗ್ಗೆ ಹೆಚ್ಚು ಹೇಳಲಿಲ್ಲ. ಅವಳು ಹೊಸ ಕಾರನ್ನು ಕೊಂಡಿದ್ದಳು. ಅವಳ ಆ ಸುಂದರ ಕಾರು ದುಬಾರಿಯಾಗಿದ್ದು, ವಿಶಾಲವಾಗಿತ್ತು. ಕೀರ್ತಿ ಹಳೆಯ ಮಾರುತಿ800 ಕಾರನ್ನು ಮಾರುವ ಬಗ್ಗೆ ಅನೇಕ ಬಾರಿ ಹೇಳಿದ್ದಳು. ನಾನು ಐವತ್ತು ಸಾವಿರಕ್ಕೆ ಅವಳಿಂದ ಆ ಕಾರನ್ನು ಖರೀದಿಸಿದೆ. ಕಾರು ಯೋಚಿಸಿದ್ದಕ್ಕಿಂತ ಚೆನ್ನಾಗಿಯೇ ಇತ್ತು. ಈ ಕಾರನ್ನು ಕೀರ್ತಿಯೇ ಹೆಚ್ಚಾಗಿ ಚಾಲನೆ ಮಾಡುತ್ತಿದ್ದಳು. ಈ ಕಾರನ್ನು ‘ಒನ್‌ಹ್ಯಾಂಡ್ ಕಾರ್’ ಎನ್ನಬಹುದಿತ್ತು. ನನಗೆ ಕೀರ್ತಿಯೇ ಕಾರು ಬಿಡುವುದನ್ನು ಕಲಿಸಿದ್ದಳು. ರಿತಿಕ್ ಕಾರು ಖರೀದಿಸುವ ಬಗ್ಗೆ ವಿರೋಧಿಸಿರಲಿಲ್ಲ, ಆದರೆ ಉತ್ಸಾಹವನ್ನೂ ತೋರಿಸಿರಲಿಲ್ಲ. ಬಹುಶಃ ಅವನಿಗೆ ಹೊಸ ಕಾರನ್ನು ಖರೀದಿಸುವ ಕನಸು ಇತ್ತೇನೋ. ಆದರೆ ನನಗೆ ಖುಷಿಯಾಗಿತ್ತು. ಕೀರ್ತಿ ಕಾರನ್ನು ನನ್ನ ಹೆಸರಿಗೆ ನೋಂದಣಿಯನ್ನು ಸಹ ಮಾಡಿಸಿಕೊಟ್ಟಿದ್ದಳು.

‘ನೀನೀಗ ಕಾರಿನ ಒಡತಿಯಾದೆ’, ರಿತಿಕ್ ವ್ಯಂಗ್ಯವಾಡಿದ್ದ.

‘ಇದನ್ನೂ ಇಬ್ಬರ ಹೆಸರಿಗೆ ಮಾಡಿಸೋಣ’, ನಾನು ರಿತಿಕ್‌ಗೆ ಹೇಳಿದ್ದೆ.

‘ನೋ ಥ್ಯಾಂಕ್ಸ್! ಈ ನಾಲ್ಕು ಕಾಲಿನ ವಾಹನ ನಿನಗೇ ಇರಲಿ, ನನಗೆ ನನ್ನ ಬೈಕ್ ಸಾಕು’. ರಿತಿಕ್ ನಾನು ನೀನು ಎನ್ನುವ ಭಾವನೆಯಿಂದ ಹೇಳಿದ್ದ. ಆ ದಿನಗಳಲ್ಲಿ ನಮ್ಮಿಬ್ಬರ ನಡುವೆ ಅಹಂಕಾರ, ಜಗಳ ಆರಂಭವಾಗಿತ್ತು. ರಿತಿಕ್‌ನ ಮನಸ್ಸಿನಲ್ಲಿ ಮುಳ್ಳು ಹೊಕ್ಕಿದ್ದು, ಅದು ಅವನನ್ನು ಚುಚ್ಚುತ್ತಿರುತ್ತದೆ ಅಥವಾ ಅವನ ಮನಸ್ಸು ನನ್ನಿಂದ ದೂರವಾಗುತ್ತಿದೆ ಎಂದು ಆಗಾಗ ಅನ್ನಿಸುತ್ತಿತ್ತು. ಈ ಎರಡೂ ಸಂಶಯಗಳು ನನ್ನನ್ನು ಆಘಾತಕ್ಕೀಡು ಮಾಡುತ್ತಿದ್ದವು. ನನಗೆ ನಿಜಾಂಶದ ಅರಿವಿರಲಿಲ್ಲ. ನಿಜವನ್ನು ತಿಳಿಯಲು ನಾನು ಭಯಪಡುತ್ತಿದ್ದೆ. ನನಗೆ ರಿತಿಕ್‌ನ ಅಭ್ಯಾಸವಾಗಿಬಿಟ್ಟಿತ್ತು. ಅವನಿಲ್ಲದೆ ಹೇಗಿರುವುದು ಎಂದು ಯೋಚಿಸುವುದು ಸಹ ಕಷ್ಟವಾಗಿತ್ತು. ಅವನ ಪ್ರೀತಿ, ಅವನ ಜಗಳ ಎಲ್ಲವೂ ನನ್ನ ಬಂಡವಾಳವಾಗುತ್ತಿದ್ದವು. ಬೇರೆಯಾಗುವ ತೀರ್ಮಾನವನ್ನು ಕೈಗೊಳ್ಳುವುದಕ್ಕೆ ಹಿಂದಿನ ದಿನದವರೆಗೆ, ಅವನಿಂದ ಬೇರೆಯಾಗಿ ಜೀವನವನ್ನು ಸಾಗಿಸುವ ಬಗ್ಗೆ ನಾನು ಯೋಚಿಸಿಯೇ ಇರಲಿಲ್ಲ. ಅವಿವಾಹಿತೆಯಾಗಿದ್ದಾಗ, ನನ್ನ ಜೊತೆಗಾರನನ್ನು ಯಾವಾಗ ಬೇಕಾದರು ತ್ಯಜಿಸಿ ಸ್ವತಂತ್ರಳಾಗಬಹುದು ಎಂಬ ನನ್ನ ಜೀವನದರ್ಶನ ಎಲ್ಲೋ ಕಳೆದುಹೋಗಿತ್ತು. ಆ ಜಗಳದ ನಡುವೆ ಅಕಸ್ಮಾತ್ ಆ ದರ್ಶನ ನನ್ನೆದುರು ಬಂದು ನಿಂತಿತು; ಆಗಲೇ ನಾನು ಸ್ವತಂತ್ರಳು ಎಂದು ಅನ್ನಿಸಿದ್ದು! ನಾನೇಕೆ ಇವೆಲ್ಲವನ್ನು ಕೇಳುತ್ತಿದ್ದೇನೆ? ಎಲ್ಲವನ್ನು ಏಕೆ ಅನುಭವಿಸುತ್ತಿದ್ದೇನೆ? ನಾನು ರಿತಿಕ್‌ನಿಂದ ತ್ಯಜಿಸಲ್ಪಡುವುದನ್ನು ಏಕೆ ನಿರೀಕ್ಷಿಸುತ್ತಿದ್ದೇನೆ? ನಾನು ಅವನಿಂದ ‘ಇಟ್ಟು’ಕೊಳ್ಳದಿರುವಾಗ, ಅವನಿಂದ ಹೇಗೆ ತ್ಯಜಿಸಲ್ಪಡುತ್ತೇನೆ? ನಾನೆಂದೂ ನಿನ್ನ ಹಿಡಿತದಲ್ಲಿರಲೇ ಇಲ್ಲವೆಂದು ಅವನಿಗೇಕೆ ಮನದಟ್ಟು ಮಾಡಲಾಗುತ್ತಿಲ್ಲ? ಪರಸ್ಪರ ಪ್ರೀತಿಯಿಂದಾಗಿ ನಾವು ಒಟ್ಟಿಗೆ ಇದ್ದೆವು, ಪ್ರೀತಿ ಕೊನೆಯಾದಾಗ, ಜೊತೆಯೂ ಕೊನೆಯಾದಂತೆಯೇ; ನಮ್ಮಿಬ್ಬರ ನಡುವೆ ಎಲ್ಲದರ ಅಂತ್ಯವೂ ಆಯಿತು.

ಆ ಕಾರು ಆಗ ನನ್ನ ಉಪಯೋಗಕ್ಕೆ ಬರುತ್ತಿತ್ತು. ನಾನು ನನ್ನ ಬಟ್ಟೆಗಳು, ನನ್ನ ಅಗತ್ಯದ ರಿಜಿಸ್ಟರ್ಡ್ ಕಾಗದಪತ್ರಗಳು, ನನ್ನ ಲೇಖನಗಳು ಎಲ್ಲವನ್ನು ಕಾರಿನಲ್ಲಿಟ್ಟೆ. ಒಂದು ರಿಜಿಸ್ಟರ್‌ನಲ್ಲಿ ನಾನು ಆಗಾಗ ಬರೆಯುತ್ತಿದ್ದ ಲೇಖನಗಳಿದ್ದವು. ಇನ್ನೊಂದು ರಿಜಿಸ್ಟರ್‌ನಲ್ಲಿ, ನನ್ನ ಪ್ರಕಟಿತ ಲೇಖನಗಳನ್ನು ಸುರಕ್ಷಿತವಾಗಿಟ್ಟಿದ್ದೆ. ಈ ಎರಡೂ ರಿಜಿಸ್ಟರ್‌ಗಳಲ್ಲಿ ಅನೇಕ ತಿಂಗಳುಗಳಿಂದ ಸಾಮಗ್ರಿಗಳಲ್ಲಿ ಹೆಚ್ಚಳವಾಗಿರಲಿಲ್ಲ. ಈಚೆಗೆ ನಾನು ಲೇಖನಗಳನ್ನು ಬರೆದಿರಲಿಲ್ಲ, ಪ್ರಕಟವೂ ಆಗಿರಲಿಲ್ಲ. ಏಕೆಂದರೆ ನನ್ನ ಲೇಖನಗಳು ಸಾಮಾನ್ಯವಾಗಿ ಮಹಿಳೆಯರ ಅಧಿಕಾರ, ಹಕ್ಕುಗಳ ಬಗ್ಗೆ ಇರುತ್ತಿದ್ದವು. ಇಂಥ ಲೇಖನಗಳನ್ನು ರಿತಿಕ್, ನನ್ನ ಪರಿಚಯದ ಆರಂಭದ ದಿನಗಳಲ್ಲಿ ಪ್ರಶಂಸಿಸುತ್ತಿದ್ದ. ನಂತರದಲ್ಲಿ ಅವನಿಗೆ ನನ್ನ ಈ ಲೇಖನಗಳು ಬೇಸರ ತರುವ ವ್ಯರ್ಥ ಲೇಖನಗಳೆಂದು ಅನ್ನಿಸುತ್ತಿದ್ದವು. ಈ ವಿಷಯವನ್ನು ಅವನು ನನಗೆ ತಿಳಿಯಪಡಿಸುತ್ತಿದ್ದ. ನನಗೆ ಲೇಖನಗಳನ್ನು ಬರೆಯುವುದು ಮಹತ್ವದ ಕಾರ್ಯವೋ ಅಥವಾ ನಮ್ಮಿಬ್ಬರ ನಡುವೆ ಶಾಂತಿಯನ್ನು ಕಾಯ್ದಿಟ್ಟುಕೊಳ್ಳುವುದು ಮಹತ್ವದ ಕಾರ್ಯವೋ? ಎಂದು ನಾನು ನನ್ನನ್ನೇ ಕೇಳಿಕೊಂಡಿದ್ದೆ; ಶಾಂತಿಯನ್ನು ಕಾಯ್ದಿಟ್ಟುಕೊಳ್ಳುವುದು ಮಹತ್ವದ ಕಾರ್ಯವೆಂದು ಉತ್ತರವನ್ನು ಸಹ ಕೂಡಲೇ ಪಡೆದಿದ್ದೆ. ಅಂದಿನಿಂದಲೇ ನನ್ನ ಲೇಖನಗಳಿಗೆ ವಿರಾಮ ಬಿದ್ದಿತ್ತು.

ಮನೆಯಿಂದ ಹೊರಟ ನಾನು ಮನೆಯ ಬೀಗದ ಕೈಯನ್ನು, ರಿತಿಕ್ ಬಂದರೆ ಕೊಡಿ ಎಂದು ಉಮಾ ವರ್ಮಾ ಅವರಿಗೆ ಕೊಟ್ಟಿದ್ದೆ. ಹಾಗಂತ ರಿತಿಕ್ ಬಳಿ ಇನ್ನೊಂದು ಬೀಗದ ಕೈ ಇರುತ್ತಿತ್ತು. ಆದರೆ ನಾನು ಒಂದು ಬೀಗದ ಕೈಯನ್ನು ಸಹ ನನ್ನ ಬಳಿ

